**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ನಂಃ- 31-15**

**(ಪ್ರಾ.ಸಾ.** 10 **ಚಾ.ಸಾ.**-9**)**

ತಾಃ 06-06-2018 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು ಃ ಮಂಜುನಾಥ

ತಂದೆಯ ಹೆಸರು ಃ ಗಂಗಯ್ಯ
ವಯಸ್ಸು ಃ 27 ವರ್ಷ
ಉದ್ಯೋಗ ಃ ಕೂಲಿ ಕೆಲಸ
ವಾಸ ಸ್ಥಳ ಃ ನಿಡವಂದ ಗ್ರಾಮ

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ಸದರಿ ಪ್ರಕರಣದಲ್ಲಿ ನನಗೆ ಯಾವುದೇ ವಿಚಾರ ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಮಹಜರ್ ಮಾಡಿ ಅಮಾನತ್ತುಪಡಿಸಿಕೊಂಡಿಲ್ಲ. ನಾನು ಸದರಿ ಪ್ರಕರಣದಲ್ಲಿನ ಯಾವುದೇ ಆರೋಪಿತರನ್ನು ಈ ಮೊದಲು ಎಂದೂ ನೋಡಿಲ್ಲ. ಪೋಲೀಸರು ಈಗ ಸುಮಾರು 4-5 ವರ್ಷಗಳ ಹಿಂದೆ ದಾಬಾಸ್‌ಪೇಟೆ ಸರ್ಕಲ್‌ನಲ್ಲಿರುವ ಬ್ಯಾಂಕ್ ಬಳಿ ಎ ಟಿ ಎಂ ಕಳ್ಳತನ ಆಗಿದೆ ಅಂತ ಹೇಳಿ ಅಲ್ಲಿ ಪೋಲೀಸರು ನನ್ನಿಂದ ಸಹಿಗಳನ್ನು ಪಡೆದಿದ್ದರು. ಈಗ ನನಗೆ ತೋರಿಸುತ್ತಿರುವ ನಿಪಿ 8 ಮತ್ತು 20

ನೋಡುತ್ತಿದ್ದೇನೆ. ನಿಪಿ 8 ಮತ್ತು 20 ರಲ್ಲಿ ನನ್ನ ಸಹಿಗಳಿಲ್ಲ. ನಿಪಿ 8 ಮತ್ತು 20 ರಲ್ಲಿ ಮಂಜು s/o ಗಂಗಯ್ಯ ಅಂತ ಬರೆದದ್ದು ನನ್ನ ಸಹಿಗಳು ಅಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಪರಿಶೀಲಿಸಲಾಯಿತು. ಸಕಾರಣಗಳು ಇರುವುದರಿಂದ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ**

ದಿನಾಂಕ 02-03-2014 ರಂದು ಪೋಲೀಸ್ ಠಾಣೆಗೆ ನನ್ನನ್ನು ಮತ್ತು ಪ್ರಾಸಾ 5 ವೆಂಕಟಾಚಲಯ್ಯ ಹಾಗೂ ಚಾಸಾ 10 ಮಂಜುನಾಥ ಬಿನ್ ರಾಜಶೇಖರಯ್ಯರವರುಗಳನ್ನು ದಾಬಾಸ್‌ಪೇಟೆ ಹತ್ತಿರ ಕರೆಯಿಸಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ದೊಡ್ಡಬೆಳವಂಗಲ ಪೋಲೀಸರು ಈ ಪ್ರಕರಣದಲ್ಲಿನ 1 ರಿಂದ 5ನೇ ಆರೋಪಿತರನ್ನು ತೋರಿಸಿ ಈ ಪ್ರಕರಣದ ವಿದ್ಯಮಾನವನ್ನು ನಮಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಸದರಿ ಆರೋಪಿತರು ನಮ್ಮನ್ನು ಮತ್ತು ಪೋಲೀಸರನ್ನು ದಾಬಾಸ್‌ಪೇಟೆ ಬಸ್ ನಿಲ್ದಾಣದಲ್ಲಿ ತುಮಕೂರು ಕಡೆ ಇರುವ ಸರ್ವೀಸ್ ರಸ್ತೆ ಕಡೆ ಇರುವ ಸೋಮೇಶ್ವರ ಬೇಕರಿ ಮುಂಭಾಗ ರಸ್ತೆಯ ಬಳಿ ಕರೆದುಕೊಂಡು ಹೋಗಿದ್ದರು ಅಂತ ಮತ್ತು ಇದೇ ಸ್ಥಳದಲ್ಲಿ ಇದ್ದ ಇಬ್ಬರು ಸಮವಸ್ತ್ರದಲ್ಲಿದ್ದ ವ್ಯಕ್ತಿಗಳನ್ನು ನಮ್ಮ ವಾಹನದಲ್ಲಿ ಹತ್ತಿಸಿಕೊಂಡು ಹೋಗಿ ದರೋಡೆ ಮಾಡಿದ್ದು ಎಂದು ಹೇಳಿ ಸದರಿ ವ್ಯಕ್ತಿಗಳನ್ನು ಹತ್ತಿಸಿಕೊಂಡು ಹೋಗಿದ್ದ ಸ್ಥಳವನ್ನು ತೋರಿಸಿದ್ದರು ಎಂದರೆ ಸರಿಯಲ್ಲ. ಮುಂದೆ ಸದರಿ ಆರೋಪಿತರು

ಹೆಚ್ ಡಿ ಎಫ್ ಸಿ ಬ್ಯಾಂಕ್ ಎ ಟಿ ಎಂ ಬಳಿ ಕರೆದುಕೊಂಡು ಹೋಗಿ ತಾಕಿವು ಹತ್ತಿಸಿಕೊಂಡು ಹೋಗಿದ್ದ ಇಬ್ಬರು ವ್ಯಕ್ತಿಗಳ ಪೈಕಿ ಒಬ್ಬನನ್ನು ಎ ಟಿ ಎಂ ಗೆ ಬಲವಂತವಾಗಿ ಕರೆದುಕೊಂಡು ಹೋಗಿ ಹಣ ಡ್ರಾ ಮಾಡಿಸಿಕೊಂಡ ಸ್ಥಳ ಎಂದು ಹೆಚ್ ಡಿ ಎಫ್ ಸಿ ಬ್ಯಾಂಕಿನ ಎ ಟಿ ಎಂ ಅನ್ನು ತೋರಿಸಿದರು ಎಂದರೆ ಸರಿಯಲ್ಲ. ಈ ಕುರಿತು ಪೋಲೀಸರು ನಿಪಿ- 20 ರಲ್ಲಿ ಕಾಣಿಸಿದಂತೆ ಮಹಜರ್ ಮಾಡಿ ಅದಕ್ಕೆ ನನ್ನ ಸಹಿ ಪಡೆದಿದ್ದರು ಎಂದರೆ ಸರಿಯಲ್ಲ. ನಿಪಿ 20 ರಲ್ಲಿ ಕನ್ನಡದಲ್ಲಿ ಮಂಜು ಎಂದು ಬರೆದು ಮಾಡಿದ ಸಹಿ ನನ್ನದೇ ಎಂದರೆ ಸರಿಯಲ್ಲ.

ದಿನಾಂಕ 25-04-2014 ರಂದು 2ನೇ ಆರೋಪಿತನು ನಮ್ಮನ್ನು ಮತ್ತು ಪೋಲೀಸರನ್ನು ಬನ್ನಹಳ್ಳಿ ಗ್ರಾಮದ ತನ್ನ ಮನೆಗೆ ಕರೆದುಕೊಂಡು ಹೋಗಿ ತನ್ನ ಮನಯ ಒಳಗಡೆ ಕಬೋರ್ಡ್‌ನಲ್ಲಿದ್ದ ಈಗ ನನಗೆ ತೋರಿಸುತ್ತಿರುವ ಮು ಮಾ 1 ವಾಚನ್ನು ಪೋಲೀಸರಿಗೆ ಹಾಜರುಪಡಿಸಿದ್ದು ಪೋಲೀಸರು ಅದನ್ನು ನಿಪಿ 8 ಮಹಜರ್‌ನಡಿ ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ನಿಪಿ 8 ಮಹಜರ್ ಓದಿ ತಿಳಿದುಕೊಂಡು ನಾನು ಅದಕ್ಕೆ ಮಂಜು ಅಂತ ಕನ್ನಡದಲ್ಲಿ ಬರೆದು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಮಂಜು ಅಂತ ಕನ್ನಡದಲ್ಲಿ ಬರೆದು ಸಹಿ ಮಾಡಿದ್ದು ನನ್ನದೇ ಎಂದರೆ ಸರಿಯಲ್ಲ.

ಈ ಕುರಿತು ನಾನು ಪೋಲೀಸರ ಮುಂದೆ ದಿನಾಂಕ 02-03-2014 ರಂದು ಈಗ ನನಗೆ ಓದಿ ಹೇಳಿದ “ ಈ ದಿನ ಬೆಳಗ್ಗೆ 10 ಗಂಟೆಗೆ ….. ಮತ್ತೊಮ್ಮೆ

ನೋಡಿದರೆ ಗುರುತಿಸುತ್ತೇನೆ ” ಎಂದು ನಿಪಿ -25 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

ಅದೇ ರೀತಿ ನಾನು ಪೋಲೀಸರ ಮುಂದೆ ದಿನಾಂಕ 27-04-2014 ರಂದು ಈಗ ನನಗೆ ಓದಿ ಹೇಳಿದ “ ಈ ದಿನ ದಿನಾಂಕ ..... ಮತೆ ನೋಡಿದರೆ ಗುರುತಿಸುತ್ತೇನೆ ” ಎಂದು ನಿಪಿ -26 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

ಈ ಪ್ರಕರಣದ ಆರೋಪಿತರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ ಃ**

ಏನೂ ಇಲ್ಲ.

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ ಹೇ ಸಾ ಸ ಸಹಿ ಮಾಡಿದ್ದಾರೆ.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು